ಎಲ್.ಇ.ಡಿ. ದೀಪಗಳಿಂದ ವಿದ್ಯುತ್ ಉಳಿತಾಯ

105(94); ಶ್ರೀಮತಿ ಪ್ರಮೋದ್ ಮಧ್ವರಾಜ್ (ಉಡುಪಿ)

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು ಎಷ್ಟು ಮೆಗಾವ್ಯಾಟ್ ವಿದ್ಯುತ್ ದಿನಕ್ಕೆ ಕಡಿತಗೊಳಿಸಲಾಗುತ್ತದೆ;

ಆ) ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ/ರಸ್ತೆಗಳಲ್ಲಿರುವ ವಿದ್ಯುತ್ ದೀಪಗಳಿಗೆ ಎಷ್ಟು ಮೆಗಾವ್ಯಾಟ್ ವಿದ್ಯುತ್ ಖರ್ಚಾಗುತ್ತದೆ;

ಇ) LED ದೀಪಗಳಿಂದ ಶೇಕಡಾ 50–70% ವಿದ್ಯುತ್ ಉಳಿತಾಯವಾಗಲಿದ್ದು, ಕರ್ನಾಟಕ ರಾಜ್ಯದಲ್ಲಿ ಇದರ ಉಪಯೋಗ ಇದುವರೆಗೆ ಎಷ್ಟು ಶೇಕಡಾ ಆಗಿರುತ್ತದೆ;

ಈ) ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯ ವೆಚ್ಚದಲ್ಲಿ LED ದೀಪಗಳಿಂದ ಉಳಿತಾಯವಾಗುವ ವೆಚ್ಚದ ಬಗ್ಗೆ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ದೈನಂದಿನ ವಿದ್ಯುತ್ ಲಭ್ಯತೆಯ ಪ್ರಮಾಣವು ವಿದ್ಯುತ್ ಉತ್ಪಾದನ ಘಟಕಗಳ ತಾತ್ಕಲಿಕ ಸ್ಥಗಿತದಿಂದಾಗಿ ಘೋಷಿತ ಅವಧಿಯ ವಿದ್ಯುತ್ ಪೂರೈಸಲು, ಕೆಲವೊಮ್ಮೆ ಸರಾಸರಿ 100 ರಿಂದ 300 ಮೆ.ವ್ಯಾ ಗಳಷ್ಟು ಅನಿಯಮಿತ ವಿದ್ಯುತ್ ಕಡಿತಗೊಳಿಸಲಾಗುವುದು..

ಆ) ರಾಜ್ಯದಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಬೀದಿ ದೀಪಗಳಿಗೆ ಬಳಕೆಯಾಗುತ್ತಿರುವ ದೈನಂದಿನ ವಿದ್ಯುತ್ ಪ್ರಮಾಣವು ಸುಮಾರು 2.2 ರಿಂದ 2.5 ಮಿಲಿಯನ್ ಯೂನಿಟ್ (ಸುಮಾರು 100 ಮೆ.ವ್ಯಾ) ಗಳಾಗಿರುತ್ತದೆ. ಈ ಪ್ರಮಾಣವು ನಿತ್ಯದ ಸರಾಸರಿ ವಿದ್ಯುತ್ ಬಳಕೆಯ ಶೇಕಡಾ 1.75 ರಷ್ಟು ಇರುತ್ತದೆ.

ಇ) ರಾಜ್ಯದಲ್ಲಿ, LED ದೀಪಗಳ ಬಳಕೆ ಕುರಿತು. ಕೆ.ಆರ್.ಇ.ಡಿ.ಎಲ್ ಸಂಸ್ಥೆಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಬೀದಿ ದೀಪಗಳಲ್ಲಿ ಹೆಚ್ಚು ವಿದ್ಯುತ್ ಬಳಸುವ ಹಾಲಿ ಇರುವ 250 ವ್ಯಾಟ್ ಸೋಡಿಯಂ ವೇಪರ್ ಲ್ಯಾಂಪ್/ಮರ್ಕ್ಯೂರಿ ವೇಪರ್ ಲ್ಯಾಂಪ್/ಮೆಟಲ್ ಹಲೈಡ್ ಲ್ಯಾಂಪ್‌ಗಳ ಬದಲು ವಿದ್ಯುತ್ ಮಿತವ್ಯಯದ 80 ವ್ಯಾಟ್ಸ್ ಸಾಮರ್ಥ್ಯದ ಎಲ್.ಇ.ಡಿ. ದೀಪಗಳನ್ನು ಈ ಕೆಳಕಂಡ ಪಟ್ಟಣ/ನಗರಗಳಲ್ಲಿ ಅಳವಡಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

- ತುಮಕೂರು ಜಿಲ್ಲೆಯ ಪಾವಗಡ ಪಟ್ಟಣ
- ಬೆಂಗಳೂರು ನಗರ ಜಿಲ್ಲೆಯ 05 ಸರ್ಕಾರಿ ಆಸ್ಪತ್ರೆಗಳು
- ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ಪಟ್ಟಣ
- ಧಾರವಾಡ ಜಿಲ್ಲೆಯ ಅಣ್ಣಿಗೇರಿ ಹೋಬಳಿ ಕೇಂದ್ರ
- ರಾಮನಗರ ಜಿಲ್ಲೆಯ ಕನಕಪುರ ಪಟ್ಟಣ

ಈ ಕಾಮಗಾರಿಗಳು ಪೂರ್ಣಗೊಂಡ ನಂತರ ವಾರ್ಷಿಕ ಸುಮಾರು 1.7 ಮಿಲಿಯನ್ ಯೂನಿಟ್ಸ್‌ಗಳಷ್ಟು ವಿದ್ಯುತ್ ಉಳಿತಾಯವಾಗುತ್ತದೆ ಎಂದು ಅಂದಾಜಿಸಲಾಗಿದೆ.

ಈ) ವಾರ್ಷಿಕ ವಿದ್ಯುತ್ ಖರೀದಿ ದರದನ್ವಯ 1.7 ದಶ ಲಕ್ಷ ಯೂನಿಟ್‌ಗಳಿಗೆ ಸರಾಸರಿ ವಾರ್ಷಿಕ ಸುಮಾರು ₹ 52 ಲಕ್ಷ ಉಳಿತಾಯವಾಗುತ್ತದೆ. (17 ಲಕ್ಷ ಯೂನಿಟ್ x 3.07 ಸರಾಸರಿ ದರ)